ಶ್ರೀ ಎಸ್. ಬಂಗಾರಪ್ಪ.--ಡೇ ಟು ಡೇ ನಡೆಯುತ್ತದೆ ಎಂದು ಹೇಳಿದರೆ ಅರ್ಥವೇನು ? ಈ ಬಗ್ಗೆ ನಾವು ಸದನದಲ್ಲಿ ಕಣ್ಣು ಮುಚ್ಚಿಕೊಂಡು ಕುಳಿತುಕೊಳ್ಳಬೇಕೇ ? ನನಗೆ ಈ ಬಗ್ಗೆ ಎಷ್ಟು ಸಿಟ್ಟು ಬಂದರೂ ಸಹಾ ಅದನ್ನು ನುಂಗಿಕೊಂಡು ಕೂತಿದ್ದೇನೆ. ನಾಳೆಯ ದಿವಸ ಮಾನ್ಯ ಧರ್ಮಸಿಂಗ್ ಅವರು ಮಂತ್ರಿಗಳಾಗಿ ಆ ಕಡೆ ಕುಳಿತುಕೊಳ್ಳಬಹುದು. ಆಗ ಮಾನ್ಯ ಗೃಹ ಮಂತ್ರಿಗಳು ಈ ಕಡೆ ಕುಳಿತುಕೊಳ್ಳಬಹುದು. ಆಗ ಇಂತಹ ವಿಷಯ ಬಂದಾಗ ಮಂತ್ರಿಗಳು ಡೇ ಟು ಡೇ ಬಿಸನೆಸ್ ಎಂದು ಈ ರೀತಿಯ ಉತ್ತರವನ್ನೇ ಕೊಟ್ಟರೆ ಅವರಿಗೆ ಎಷ್ಟು ಕೋಪ ಬರುವುದಿಲ್ಲ ?

ಶ್ರೀ ಬಿ. ರಾಚಯ್ಯ.--ನಾನು ಮುಂದೆ ವಿಷಯವನ್ನು ಹೇಳವುದಕ್ಕೆ ಇದ್ದೆನು. ಅವರು ಅಷ್ಟಕ್ಕೇ ಮಧ್ಯೆ ಎದ್ದು ನಿಂತು ಮಾತನಾಡಿದರು.

ಶ್ರೀ ಎಸ್. ಬಂಗಾರಪ್ಪ --ಮೊದಲೇ ನೀವು ಆ ರೀತಿ ಹೇಳುವುದಕ್ಕೆ ಹೋಗಬೇಡಿ. ಅಂತಹದ್ದು ಹೇಳುವುದಿದ್ದರೆ ಅದನ್ನು ಕೊನೆಗೆ ಇಟ್ಟುಕೊಳ್ಳಿ. ಮೊದಲೇ ಆ ರೀತಿ ಹೇಳಿ ಬಿಟ್ಟರೆ ಯಾರಿಗೆ ತಾನೇ ಕೋಪ ಬರುವುದಿಲ್ಲ ?

ಅಧ್ಯಕ್ಷರು.--ಮಾನ್ಯ ಬಂಗಾರಪ್ಪನವರೇ, ಸ್ವಲ್ಪ ಸಮಾಧಾನ ಮಾಡಿಕೊಳ್ಳಿ.

ಶ್ರೀ ಆರ್. ಎನ್. ನಾಯಕ್.--ಕೊಲೆ ಪ್ರತಿದಿನ ನಡೆಯುತ್ತಿವೆಯೆ ? ಹಾಗಿದ್ದರೆ ಒಪ್ಪಿಕೊಳ್ಳಿ. ಈ ರಾಜ್ಯದಲ್ಲಿ ೪ ಕೋಟಿ ಜನರಿದ್ದಾರೆ.....

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಈ ರೀತಿ ಮಾನ್ಯ ಸಚಿವರು ಉತ್ತರ ಕೊಟ್ಟರೆ ಮಾನ್ಯ ಧರ್ಮಸಿಂಗ್‌ರವರಿಗೆ ಸಿಟ್ಟು ಬಂದರೆ ತಾವು ಮಾನ್ಯತೆ ಮಾಡಬೇಕಾಗುತ್ತದೆ, ಏಕೆಂದರೆ ಅವರಿಗೆ ಸಿಟ್ಟು ಬಂದಿರುತ್ತದೆ.

ಅಧ್ಯಕ್ಷರು.--ನೀವು ಅವರಿಗೆ ಸಮಾಧಾನ ಮಾಡಿ.

ಶ್ರೀ ಎಸ್. ಬಂಗಾರಪ್ಪ.--ಧರ್ಮಸಿಂಗ್‌ರವರಿಗೆ ಸಿಟ್ಟು ಬಂದರೆ ಅದು ಕಾನೂನು ಚೌಕಟ್ಟಿನಲ್ಲಿ ಬಂದಿದೆ ಎಂದು ತಾವು ತಿಳಿದುಕೊಳ್ಳಬೇಕು.

ಶ್ರೀ ಎಂ. ರಾಮಪ್ಪ --ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಉತ್ತರ ಕೊಡವುದಕ್ಕೆ ಸಂಬಂಧಪಟ್ಟ ಮಂತ್ರಿಗಳೇ ಇಲ್ಲ.

ಅಧ್ಯಕ್ಷರು.--ಉತ್ತರವನ್ನು ತಮಗೆ ಅನಂತರ ತರಿಸಿಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು--ತಾವು ಪ್ರಶ್ನೆಯನ್ನು ಕೇಳಿ.....

ಶ್ರೀ ಕೆ. ಮಲ್ಲಪ್ಪ.--ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ರಾಮಪ್ಪನವರು....

ಶ್ರೀ ಎಂ. ರಾಮಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಲ್ಲಪ್ಪನವರು ನನ್ನ ಬಗ್ಗೆ ಏನೋ ಹೇಳುತ್ತಿದ್ದಾರೆ....

ಅಧ್ಯಕ್ಷರು. --ನೀವು ಇಬ್ಬರೂ ಮಾತನಾಡಿದ್ದು ರೆಕಾರ್ಡ್‌ಗೆ ಹೋಗುವುದಿಲ್ಲ. ರಾಮಪ್ಪನವರೇ ನಿಮ್ಮ ಪ್ರಶ್ನೆಯನ್ನು ಓದಿ ಹೇಳಿ.

(೮) ತುಂಗಭದ್ರ ಮೇಲ್ದಂಡೆ ಕಾಲುವೆಯನ್ನು ಮುಚ್ಚಿರುವುದರಿಂದ ರೈತರು ಉಂಟಾಗಿರುವ ತೊಂದರೆ

ಶ್ರೀ ಎಂ. ರಾಮಪ್ಪ.— ನಾನು ಬರೆದು ಕೊಟ್ಟಿರುವುದಕ್ಕಿಂತಲೂ ಕಡಿಮೆ ಮಾತಿನಲ್ಲಿ ಹೇಳುತ್ತೇನೆ ನವರಿಗೆ ಯಾವಾಗಲೂ ಮಾರ್ಚ್‌ಯವರೆಗೆ ತುಂಗಭದ್ರ ಮೇಲ್ದಂಡೆಯಿಂದ ನೀರು ಕೊಡುತ್ತಿದ್ದುದು....

ಅಧ್ಯಕ್ಷರು.--ತಾವು ಏನು ನೋಟೀಸನ್ನು ಕಳುಹಿಸಿಕೊಟ್ಟಿದ್ದೀರಿ ಅದನ್ನು ಓದಿ ಹೇಳಿ.

ಶ್ರೀ ಎಂ. ರಾಮಪ್ಪ —ಅದು ಕನ್ನಡದಲ್ಲಿದೆ. ಕನ್ನಡವನ್ನು ಓದುವುದಕ್ಕೆ ನನಗೆ ಬರುವುದಿಲ್ಲ. ಇನ್ನು ಮೇಲೆ ತೆಲುಗಿನಲ್ಲೇ ಬರೆದುಕೊಂಡು ಬರಬೇಕಾಗುತ್ತದೆ.

ಅಧ್ಯಕ್ಷರು.—ಹಾಗಾದರೆ ನಿಮ್ಮ ಪರವಾಗಿ ನಾನೇ ಅದನ್ನು ಓದಿ ಹೇಳುತ್ತೇನೆ.

"ಪ್ರತಿ ವರ್ಷ ಮೇಲ್ಕಂಡ ಕಾಲುವೆಯನ್ನು (ತುಂಗಭದ್ರಾ) ಮಾರ್ಚಿ ತಿಂಗಳಲ್ಲಿ ಮುಚ್ಚಲಾಗುತ್ತಿತ್ತು. ಆದರೆ ಈ ವರ್ಷ ಜಲಾಶಯದಲ್ಲಿ ಸಾಕಷ್ಟು ನೀರಿದ್ದರೂ ಕಾಲುವೆಯನ್ನು ಮುಚ್ಚಿರುವುದರಿಂದ ಪೈರುಗಳು ಒಣಗಿಹೋಗಿ ರೈತರಿಗೆ ನಷ್ಟವಾಗುವ ಪ್ರಸಂಗ ಬಂದಿದೆ. ಸರ್ಕಾರ ಕೂಡಲೇ ಈ ಕಾಲುವೆಯನ್ನು ಮುಚ್ಚದೇ ಪ್ರತಿ ವರ್ಷದಂತೆ ಮಾರ್ಚಿ ತಿಂಗಳವರೆಗೂ ನೀರನ್ನು ಬಿಡಲು ಸೂಕ್ತ ಆಜ್ಞೆ ಮಾಡಬೇಕಾಗಿ ವಿನಂತಿಸುತ್ತೇನೆ." ಎಂದು ಇದೆ.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಇಲ್ಲವಾದ್ದರಿಂದ ಅವರಿಂದ ಉತ್ತರವನ್ನು ತರಿಸಿಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ. ಈಗಾಗಲೇ ಮಾನ್ಯ ಸದಸ್ಯರು ಸಂಬಂಧಪಟ್ಟ ಸಚಿವರ ಜೊತೆಯಲ್ಲಿ ಇದರ ಬಗ್ಗೆ ಚರ್ಚೆ ಮಾಡಿದ್ದಾರೆಂದು ತಿಳಿದಿದ್ದೇನೆ.

ಶ್ರೀ ಎಂ. ರಾಮಪ್ಪ.—ನಾನು ಅವರ ಜೊತೆಯಲ್ಲಿ ಚರ್ಚೆ ನಡೆಸಿಲ್ಲ.

ಅಧ್ಯಕ್ಷರು.—ನಾನು ಉತ್ತರ ತರಿಸಿಕೊಡುತ್ತೇನೆ.

ಶ್ರೀ ಕೆ. ಮಲ್ಲಪ್ಪ.— ಮಾನ್ಯ ಅಧ್ಯಕ್ಷರೇ, ಮಾನ್ಯ ರಾಮಪ್ಪನವರು

ಶ್ರೀ ಎಂ. ರಾಮಪ್ಪ:—ಮಾನ್ಯ ಮಲ್ಲಪ್ಪನವರು ನನ್ನ ಬಗ್ಗೆ ಏನೋ ಹೇಳುತ್ತಿದ್ದಾರೆ.

ಅಧ್ಯಕ್ಷರು.—ನೀವು ಇಬ್ಬರು ಮಾತನಾಡಿದ್ದೂ ರೆಕಾರ್ಡ್‌ಗೆ ಹೋಗುವುದಿಲ್ಲ.

(೯) ಮೈಸೂರು ಸಿಟಿ ಕಾರ್ಪೋರೇಷನಿನಲ್ಲಿ ಟ್ಯಾಕ್ಸ್ ಇನ್ಸ್‌ಪೆಕ್ಟರ್‌ರವರ ಹುದ್ದೆಯನ್ನು ಒಂದನೇ ದರ್ಜೆಗೆ ಏರಿಸುವುದು

ಶ್ರೀ ವೇದಾಂತ ಹೆಮ್ಮಿಗೆ(ಕೃಷ್ಣರಾಜ).—ಮಾನ್ಯ ಅಧ್ಯಕ್ಷರೇ, ಮೈಸೂರು ನಗರ ಕಾರ್ಪೋರೇಷನ್‌ನ ಏನೇ ದರ್ಜೆ ಟ್ಯಾಕ್ಸ್ ಇನ್‌ಸ್ಪೆಕ್ಟರ್ ಹುದ್ದೆಯನ್ನು ಮೊದಲನೇ ದರ್ಜೆ ಟ್ಯಾಕ್ಸ್ ಇನ್‌ಸ್ಪೆಕ್ಟರ್ ವೇತನ ಶ್ರೇಣಿಗೆ ಏರಿಸಿ ತಕ್ಷಣ ಜಾರಿಗೆ ಕೊಡಬೇಕೆಂದು ಸರ್ಕಾರ ೨೦-೫-೧೯೬೫ ರಂದು ಆಜ್ಞೆಯನ್ನು ಹೊರಡಿಸಿದ್ದರೂ ಅದು ಇದುವರೆಗೂ ಜಾರಿಗೆ ಬಂದಿಲ್ಲ. ಇದರ ಬಗ್ಗೆ ಹೈಕೋರ್ಟ್ ಸಹ ಆದೇಶ ನೀಡಿದೆ ಎಂದು ತಿಳಿದುಬಂದಿದೆ. ಸರ್ಕಾರ ಇದರ ಬಗ್ಗೆ ಕೈಗೊಂಡಿರುವ ಕ್ರಮವೇನು ಎಂಬುದರ ಬಗ್ಗೆ ಮಾನ್ಯ ಸಚಿವರ ಗಮನ ಸೆಳೆಯಲು ಇಚ್ಛಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳ ಮತ್ತು ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೇ, ಹೈಕೋರ್ಟ್ ಆದೇಶ ನೀಡಿದೆ ಎಂದು ತಿಳಿದು ಬಂದಿದೆಯೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಹೈಕೋರ್ಟಿನ ಆದೇಶದ ಪ್ರಕಾರ ನಾವು ನಡೆದುಕೊಳ್ಳಬೇಕಾಗುತ್ತದೆಂಬುದನ್ನು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

೧–೦೦ ಪಿ. ಎಂ.

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾರ್ಪಣಾ ನಿರ್ಣಯದ ಮೇಲಿನ ಚರ್ಚೆ

† ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಚಿಂತಾಮಣಿ).—ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರು ಉಭಯ ಸದನಗಳನ್ನೂ ಕುರಿತು ಮಾಡಿದ ಭಾಷಣ ಬಗ್ಗೆ ಮಂಡಿಸಿದ ಅಭಿನಂದನಾ ನಿರ್ಣಯವನ್ನು ಸ್ವಾಗತಿಸುತ್ತಾ ಒಂದೆರಡು ಮಾತನ್ನು ನಾನೂ ಹೇಳಬಯಸುತ್ತೇನೆ.

---

†ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.